ಅಮ್ಮನ ಮಾತು ಕೇಳಿ ತುಸು ನಾಚಿದಂತಹ ವಯ್ಯಾರ ಮಾಡಿ, ಬಾನಿಗೆ ಮುಖಮಾಡಿ ಮತ್ತೆ ನಕ್ಕ. ಡಾ.ವಾಹೀದ್ ಅವರಿಗೆ ಆ ಕ್ಷಣದಲ್ಲಿ ಆತನನ್ನು ಅಪ್ಪಿಕೊಂಡು ಮುದ್ದಿಸಬೇಕು ಅಂತನೇ ಅನಿಸಿತ್ತು.

ತಟ್ಟನೆ ಅವರು ಎದ್ದು ನಿಂತು ಹಾಗೆಯೇ... ಆತನನ್ನು ಬಾಚಿಕೊಂಡು ಅಪ್ಪಿ ಹಿಡಿದು 'ಒಂದು ಹಾಡು ಹಾಡೋ... ಜಾಣ ಮುದ್ದು...' ಎಂದು ಮುದ್ದಾಡಿ ಕೆಳಗಿಳಿಸುವಷ್ಟರಲ್ಲಿ – ಕೌಶಿಕ ಆತನ ಅಪ್ಪ ಅಮ್ಮ ಇಬ್ಬರೂ ಜತೆಯಾಗಿ ಮೂರ್ಛೆ ಬೀಳುವಷ್ಟು ಚಂದದ ಹಾಡೊಂದನ್ನು ಹಾಡತೊಡಗಿದ್ದ.

ನೀsssರಿನ ಮೇsssಲೆ ತೋsssರುತ ಲೀsssಲೆ |
ಚೆಲುಮರಿ ಮೀsssನೊಂದು |
ಬಾsssಲವ ಬಡಿದು ಹುಳುಗಳ ಹಿಡಿದು |
ತಿನ್ನುತಲಿರುವಂದೂsss |
ಬೆಸ್ತನು ಬಂದಾsss ಬಲೆಯನು ತಂದಾ...
ಬೀsssಸಿದ ನೀsssರಲ್ಲಿ |
ಆ ಚೆಲುಮೀsssನು ಕ್ಷಣದಲಿ ತಾsssನು |
ಬಿದ್ದಿತು ಬಲೆಯಲ್ಲಿsss |
ಮೀsssನನು ಹಿಡಿದು, ಹೋsssದನು ನಡೆದು |
ನೀರೇೕ ಬರಿದಾsssಯ್ತು |
ಅವುಗಳನ್ನೆಲ್ಲಾ ನೋsssಡುತ ನಿಂತ |
ಮನವೇsss ಬರಿದಾಯ್ತುsss |

ಕೌಶಿಕನ ಹಾಡು ನಿಂತೊಡನೆ ಡಾ. ವಾಹೀದ್ ಅವರು 'ವಾವ್ ವಾವ್...' ಎಂದು ಉದ್ಗರಿಸಿ ಚಪ್ಪಾಳೆ ತಟ್ಟುತ್ತ ಆತನನ್ನು ಮತ್ತೆ ಎಳೆದು ತನ್ನ ತೊಡೆಯಲ್ಲಿ ಕೂರಿಸಿಕೊಂಡು 'ಭಾರೀ ಜಾಣ ಮಗು ಕಣೋ ನೀನು... ಮುದ್ದು ಕಣೋ ನೀನು' ಎಂದು ಆತನ ಬೆನ್ನು ತಟ್ಟಿದ್ದರು.

ಅಕ್ಷಯಕುಮಾರನಿಗೆ, ತನ್ನ ಮಗನ ನೆನಪು ಶಕ್ತಿಯನ್ನು ಕಂಡು, ಅಚ್ಚರಿಯ ಜೊತೆ ಜೊತೆಗೆ ಹಿಗ್ಗೂ ನುಗ್ಗಿ ಬಂದಿತ್ತು. ಮಗನ ಸಾಫ್ಟ್‌ವೇರ್ ಎಂಜಿನಿಯರಿಂಗ್ ಕನಸು ಕಾಣುತ್ತ... ಅದಕ್ಕೆ ಅಡಿಪಾಯವಾಗಿ ಮಗ್ಗಿಯ ಹುಚ್ಚೊಂದನ್ನು ಹಚ್ಚಿಕೊಂಡಿದ್ದ ತನ್ನ ಗಂಡನ ಮುಖದಲ್ಲಿ ಮಗನ ಹಾಡಿನ ಬಗ್ಗೆ ಹಿಗ್ಗಿನ ಬುಗ್ಗೆಗಳು ಎದ್ದೇಳುತ್ತಿರುವುದನ್ನು ಕಂಡು ಕುಮುದಳೂ ನಿಧಾನಕ್ಕೆ ಉಲ್ಲಸಿತಳಾದಳು. ಆಕೆಯ ಕಿಬ್ಬೊಟ್ಟೆ ಆಗಿನಿಂದ ಯಾಕೋ ಒಂಥರಾ ನೋಯುತ್ತಿದ್ದರೂ... ಈಗಿನ ಉಲ್ಲಾಸದ ನಡುವೆ ಆ ನೋವು ಎಲ್ಲೋ ಅವಿತು ಕೂತಿತ್ತು.

ಇದೀಗ... ಮಗನು ಹಾಡು ಕೇಳಿಸಿಕೊಂಡೊಡನೆ ಅಪ್ಪ ಅಕ್ಷಯಕುಮಾರನನ್ನು ಪಾಪಪ್ರಜ್ಞೆಯ ಎಳೆಯೊಂದು ಬಲವಾಗಿ ಜಗ್ಗತೊಡಗಿತ್ತು. ತಾನು ಇಷ್ಟು ದಿನ 'ತ್ರಿ ಫೋರ್ ಥ್ರೂರ್ ನೈನ್' ಎಂಬ ಶಬ್ದಗಳ ಕೋಲನ್ನೇ ಹಿಡಿದು, ಜ್ಞಾಪಕಶಕ್ತಿ ಇಲ್ಲವೇ ಇಲ್ಲವೆಂದು ಆ ಪುಟ್ಟ ಮಗನನ್ನು ಹೊಡೆದು ಬಡಿದು ದಂಡಿಸಿದ್ದನ್ನು ನೆನಪಿಸಿಕೊಂಡು ಆತನೇ ನಿಧಾನಕ್ಕೆ ಖಿನ್ನನಾದ.

ಬಾಲ್ಯದಲ್ಲಿ ತನ್ನ ಮೇಷ್ಟ್ರು ಸುಬ್ಬರಾಯರು ಪ್ರತಿದಿನವೂ 'ಶುಕ್ರವಾರಕ್ಕೆ ಮೊದಲು ಗುರುವಾರವೋ, ಗುರುವಾರಕ್ಕೆ ಮೊದಲು ಶುಕ್ರವಾರವೋ?' 'ಎರಡಕ್ಕೆ ಮೊದಲು ಒಂದೋ, ಒಂದಕ್ಕೆ ಮೊದಲು ಎರಡೋ' ಎಂಬ 'ಅಸಂಬದ್ಧ ಪ್ರಶ್ನಾಕೋಲು'ಗಳಿಂದ ತನ್ನನ್ನು ಬಾರಿಸುತ್ತ,